

## ದುರಹಂಕಾರ ಹಾನಿಕರವಾದುದು

ಗುರುವಿನಲ್ಲಿ ಅಗಾಧವಾದ ಭಕ್ತಿಯಿದ್ದ ಶಿಷ್ಯನೊಬ್ಬ ಗುರುವಿನ ನಾಮಸ್ಮರಣೆಯ ಸಹಾಯದಿಂದಲೇ ನದಿಯ ಮೇಲೆ ನಡೆದುಕೊಂಡು ಹೋದ. ಗುರು ಇದನ್ನು ನೋಡಿ, "ಏನು ನನ್ನ ಹೆಸರಿನಲ್ಲಿ ಇಷ್ಟೊಂದು ಶಕ್ತಿ ಇದೆಯೆ? ಹಾಗಾದರೆ ನನ್ನ ಮಹಿಮೆ ಎಷ್ಟು, ನಾನೆಷ್ಟು ಬಲಶಾಲಿ" ಎಂದು ಭಾವಿಸಿದ. ಮಾರನೆ ದಿನ ಗುರು ಕೂಡ "ನಾನು ನಾನು" ಎನ್ನುತ್ತ ನದಿಯ ಮೇಲೆ ಹೋಗಲು ಯತ್ನಿಸಿದ. ಕಾಲಿಟ್ಟ ತತ್‌ಕ್ಷಣವೇ ನೀರಿನಲ್ಲಿ ಮುಳುಗಿದ. ಪಾಪ, ಅವನಿಗೆ ಈಜುವುದಕ್ಕೂ ಬರುತ್ತಿರಲಿಲ್ಲ. ನಂಬಿಕೆಯಿಂದ ಅದ್ಭುತವನ್ನು ಸಾಧಿಸಬಹುದು. ಆದರೆ ದುರಹಂಕಾರದಿಂದ ವ್ಯಕ್ತಿ ನಾಶವಾಗುತ್ತಾನೆ. ಅಹಂಕಾರದ ಭಾರ ಸಂಸಾರದ ನೀರಿನಲ್ಲಿ ಮುಳುಗುವಂತೆ ಮಾಡುತ್ತದೆ. ◆